**ಸಮಗ್ರ ಶಿಕ್ಷಣ – ಕರ್ನಾಟಕ**
**ಉಪನಿರ್ದೇಶಕರು ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,**
**ಸಮಗ್ರ ಶಿಕ್ಷಣ – ಕರ್ನಾಟಕ, ತುಮಕೂರು, ತುಮಕೂರು ಜಿಲ್ಲೆ.**
**ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ (ಇಕೋ–ಕ್ಲಬ್)**

ಸಂಖ್ಯೆ:ಸ.ಶಿ.ಕ/ಸಿ1/ರಾ.ಹ.ಪ.61/2021–22 ದಿನಾಂಕ:16.03.2022

**ಸಭೆಯ ನಡಾವಳಿ**

ದಿನಾಂಕ 14.03.2022 ರಂದು ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ 2021–22ನೇ ಸಾಲಿನ ಇಕೋ–ಕ್ಲಬ್ ಚಟುವಟಿಕೆಗಳ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ.
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ) ಸದಸ್ಯ ಕಾರ್ಯದರ್ಶಿಗಳು.
3. ಡಿವೈಪಿಸಿ ಆರ್.ಎಂ.ಎಸ್.ಎ ಉಪನಿರ್ದೇಶಕರ ಕಛೇರಿ, ತುಮಕೂರು (ದ) ಜಿಲ್ಲಾ ನೋಡೆಲ್ ಅಧಿಕಾರಿಗಳು.
4. ಡಿವೈಪಿಸಿ ಆರ್.ಎಂ.ಎಸ್.ಎ ಉಪನಿರ್ದೇಶಕರ ಕಛೇರಿ, ಮಧುಗಿರಿ, ಜಿಲ್ಲಾ ನೋಡೆಲ್ ಅಧಿಕಾರಿಗಳು.
5. ಎಪಿಸಿ, ಕಾರ್ಯಕ್ರಮ, ಉಪನಿರ್ದೇಶಕರ ಕಛೇರಿ ತುಮಕೂರು (ದ), ಸದಸ್ಯರು.
6. ಜಿಲ್ಲಾ ಅರಣ್ಯಾಧಿಕಾರಿಗಳು, ತುಮಕೂರು, ಸದಸ್ಯರು.
7. ಜಿಲ್ಲಾ ಪರಿಸರ ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ, ತುಮಕೂರು ಜಿಲ್ಲೆ. ಸದಸ್ಯರು.
8. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ತುಮಕೂರು. ಸದಸ್ಯರು.
9. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತುಮಕೂರು, ಸದಸ್ಯರು.
10. ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತುಮಕೂರು, ಸದಸ್ಯರು.
11. ಮುಖ್ಯ ಶಿಕ್ಷಕರು, ಜಿಹೆಚ್‌ಪಿಜಿಎಸ್ ಹುಳಿಯಾರು, ಚಿ.ನಾ.ಹಳ್ಳಿ, ತಾ॥.
12. ಸಹ ಶಿಕ್ಷಕರು, ಇಕೋ ಕ್ಲಬ್ ಜಿಹೆಚ್‌ಪಿಜಿಎಸ್ ಹುಳಿಯಾರು ಚಿ.ನಾ.ಹಳ್ಳಿ ತಾ॥.
13. ಸ.ಶಿ, ಸ.ಹಿ.ಪ್ರಾ.ಶಾಲೆ, ತಲಪುರುಕೆ, ತುಮಕೂರು ತಾ॥, ಸದಸ್ಯರು
14. ಸಹ ಶಿಕ್ಷಕರು, ಸ.ಪ್ರೌ.ಶಾಲೆ ಜಕ್ಕೇನಹಳ್ಳಿ ತುಮಕೂರು ತಾ॥, ಸದಸ್ಯರು.
15. ಸ.ಶಿ, ಸ.ಹಿ.ಪ್ರಾ.ಶಾಲೆ, ಕುಂದೂರು, ತುಮಕೂರು ತಾ॥, ಸದಸ್ಯರು.
16. ಮುಖ್ಯೋಪಾಧ್ಯಾಯರು, ಸ.ಪ್ರೌ.ಶಾಲೆ ಕೊಟ್ಟಾಗಾರ್ಲಹಳ್ಳಿ ಮದುಗಿರಿ ತಾ॥, ಸದಸ್ಯರು.
17. ಮುಖ್ಯೋಪಾಧ್ಯಾಯರು, ಸ.ಪ್ರೌ.ಶಾಲೆ ಹನುಮನಹಳ್ಳಿ, ಮಧುಗಿರಿ ತಾ॥ ಸದಸ್ಯರು.
18. ಸ.ಪ್ರೌ.ಶಾಲೆ ಬೆಂಚಿ ಬಸವನಹಳ್ಳಿ, ಶಿರಾ ತಾ॥ ಮಧುಗಿರಿ ಜಿಲ್ಲೆ.

ಸಭೆಗೆ ಆಗಮಿಸಿದ ಎಲ್ಲರನ್ನು ಉಪನಿರ್ದೇಶಕರು ಮತ್ತು ಸಮಿತಿಯ ಸದಸ್ಯಕಾರ್ಯದರ್ಶಿಗಳು ಆದ ಶ್ರೀ ನಂಜಯ್ಯ ಸಿ. ರವರು ಸ್ವಾಗತಿಸಿದರು.

ಈ ಬಾರಿ ಎರಡೂ ಶೈಕ್ಷಣಿಕ ಜಿಲ್ಲೆಗಳಿಗೆ ತಲಾ 300 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆಗಳಿಗೆ ರೂ 5000/– ದಂತೆ ಎಂಪ್ರಿ ಸಂಸ್ಥೆವತಿಯಿಂದ ಶಾಲಾ ಖಾತೆಗಳಿಗೆ ಇಕೋ–ಕ್ಲಬ್ ಅನುದಾನ ಜಮೆ ಆಗಿರುತ್ತದೆ. ಅದೇ ರೀತಿ 2 ಜಿಲ್ಲೆಗಳ ಜಿಲ್ಲಾ ಕಛೇರಿಗೆ ರೂ 25000/– ದಂತೆ ಅನುದಾನ ಜಮೆ ಆಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಅನುದಾನವನ್ನು ಶಾಲೆಗಳು ವಾರ್ಷಿಕ ಕ್ರಿಯಾಯೋಜನೆ ತಯಾರಿಸಿಕೊಂಡು ಈ ಕೆಳಕಂಡ ಚಟುವಟಿಕೆಗಳನ್ನು ಮಾಡಿರುತ್ತಾರೆ

# 2021–22ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಚಟುವಟಿಕೆಗಳು

- ಶಾಲೆಗಳು ಇಕೋ–ಕ್ಲಬ್ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಿರುತ್ತಾರೆ.
- ವಿಶ್ವ ಪರಿಸರ ದಿನಾಚರಣೆ, ವಿಶ್ವ ಓಜೋನ್ ದಿನಾಚರಣೆ... ಮುಂತಾದ ದಿನಾಚರಣೆಗಳನ್ನು ಮಾಡಲಾಗಿದೆ.
- ಸಂದರ್ಭದ ಔಚಿತ್ಯಗಳಿಗನುಗುಣವಾಗಿ ಪ್ರಬಂಧ, ಭಾಷಣ, ಚಿತ್ರಬಿಡಿಸುವುದು, ಮುಂತಾದ ಚಟುವಟಿಕೆಗಳನ್ನು ಮಾಡಲಾಗಿದೆ.
- ಎಲ್ಲಾ ವಿಷಯಗಳ ಪಾಠ ಬೋಧನೆಯಲ್ಲಿ ಪರಿಸರ ಸಂರಕ್ಷಣೆ, ಗಿಡಮರಗಳ ಪ್ರಾಮುಖ್ಯತೆ, ಜೀವ / ಸಸ್ಯ ವೈವಿಧ್ಯದ ಪ್ರಾಮುಖ್ಯತೆಗಳನ್ನು ಮೂರ್ತವಾಗಿ ಮಕ್ಕಳಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ.
- ಕ್ಷೇತ್ರ ಭೇಟಿ, ಸಂದರ್ಶ, ಪ್ರಾಜೆಕ್ಟ್‌ವರ್ಕ್ ಮುಂತಾದ ವಿಧಾನಗಳ ಮೂಲಕ ಇಕೋ–ಕ್ಲಬ್ ಚಟುವಟಿಕೆಗಳನ್ನು ಸಮಾಜಕ್ಕೆ ಕೊಂಡೊಯ್ಯುವ ಕಾರ್ಯಗಳನ್ನು ಮಾಡಲಾಗಿದೆ
- ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಉಳಿದ ಶಿಕ್ಷಕರ ನೆರವು ಪಡೆದು ಅವರ ಮೂಲಕವೂ ಪಠ್ಯ, ಪಠ್ಯಪೂರಕ ಚಟುವಟಿಕೆಗಳನ್ನು ಮಾಡಿಸುವರು.
- ಸ್ಥಳೀಯ ಸನ್ನಿವೇಶಗಳನ್ನು ಆಧರಿಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.
- ಕೋವಿಡ್–19 ಸಂಬಂಧ ಎಸ್‌ಓಪಿ ಯನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಚಟುವಟಿಕೆಗಳನ್ನು ಮಾಡಲಾಗಿದೆ.
- ಪೋಷಣ್ ಅಭಿಯಾನ ಕಾರ್ಯಕ್ರಮವನ್ನು ಶಾಲೆಗಳಲ್ಲಿ ಆಚರಿಸಲಾಗಿದೆ.

ಮಾನ್ಯ ಜಿಲ್ಲಾಧಿಕಾರಿಗಳು ಶಾಲೆಯೊಂದರಿಂದ ಮಾಡಿರುವ ಕಾರ್ಯಗಳನ್ನು ವಿವರಿಸಲು ಸೂಚಿಸಿದರು. ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾ॥ ಹುಳಿಯಾರು ಹಿರಿಯ ಪ್ರಾಥಮಿಕ ಶಾಲೆಯು ಈ ವರ್ಷ ಮಾಡಿರುವ ಸಚಿತ್ರ ವರದಿಯನ್ನು ಅಲ್ಲಿನ ಮುಖ್ಯ ಶಿಕ್ಷಕರು ಸಭೆಯ ಮುಂದೆ ಮಂಡಿಸಿದರು. ಇವರ ಮಂಡನೆಯ ಸಾರಾಂಶ, ಕಸದ ಡಬ್ಬಗಳನ್ನು ಬಳಸಲಾಗಿದೆ. ಇಕೋ ಕ್ಲಬ್ ಉದ್ದೇಶಗಳು ಈಡೇರುವಂತೆ ಮಕ್ಕಳಿಗೆ ವಿವಿಧ ರೀತಿಯ ಉಪನ್ಯಾಸ ಚಟುವಟಿಕೆಗಳನ್ನು ಮಾಡಲಾಗಿದೆ. ಇದರಿಂದ ಮಕ್ಕಳಲ್ಲಿ ಪರಿಸರ ಪ್ರೇಮ, ಕಸ ವಿಲೇವಾರಿ ಮತ್ತು ಪ್ರತ್ಯೇಕಿಸುವ ಮಹತ್ವ ತಿಳಿದಿದೆ. ಪರಸ್ಪರರಲ್ಲಿ ಹೊಂದಾಣಿಕೆ, ಸಸ್ಯ ಪ್ರೀತಿ ಪರಿಸರ ಕಾಳಜಿ ಉಂಟಾಗಿದೆ. ಇದರ ಸಾರಾಂಶವೆಂದರೆ "ಮಕ್ಕಳೇ ಮುಂದಿನ ಜಗತ್ತಿನ ನಿರ್ಮಾತೃಗಳು ಮತ್ತು ನಿರ್ವಾಹಕರಾಗಿದ್ದಾರೆ ಅವರನ್ನು ಇಂದಿನಿಂದಲೇ ಶಾಲೆಗಳಲ್ಲಿ ತಯಾರಿಸಲಾಗುತ್ತಿದೆ". ಒಂದು ಮಗು ಬದಲಾದರೆ ಮುಂದೆ ಅವನೇ ಉತ್ತಮ ಪರಿಸರವುಳ್ಳ ನಾಡನ್ನು ಕಟ್ಟಬಲ್ಲ". ಎಂಬ ಸಂದೇಶಗಳು ಈ ಕಾರ್ಯಕ್ರಮದಿಂದ ಬಂದಿರುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳು ಸದರಿ ಶಾಲಾ ಕಾರ್ಯವನ್ನು ಶ್ಲಾಘಿಸಿದರು. ಇದರಂತೆ ಉಳಿದ ಶಾಲೆಗಳಲ್ಲಿಯೂ ಉತ್ತಮ ಚಟುವಟಿಕೆಗಳನ್ನು ಮಾಡಲು ಕ್ರಮ ವಹಿಸಲು ಸೂಚಿಸಿದರು.

ಇದೇ ಸಂದರ್ಭದಲ್ಲಿ ಈ ಶಾಲಾ ಮೈದಾನದಲ್ಲಿಯೇ ಕೆಪಿಎಸ್ ಶಾಲೆಯ ಪ್ರಾಥಮಿಕ ವಿಭಾಗವೂ ಸಹ ಕಾರ್ಯ ನಿರ್ವಹಿಸುತ್ತದೆ. ಈ 2 ಶಾಲೆಗಳನ್ನು ವಿಲೀನ ಮಾಡಲು ಮಾನ್ಯ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

ಶಾಲೆಗಳಿಗೆ ವಿವಿಧ ಇಲಾಖೆಗಳು ಮಾಡುತ್ತಿರುವ ಕಾರ್ಯಗಳನ್ನು ಚರ್ಚಿಸಲಾಯಿತು. ಪ್ರಧಾನವಾಗಿ ಜಲಜೀವನ್ ಮಿಶನ್ ವತಿಯಿಂದ ಅಡುಗೆ ಮನೆ, ಶೌಚಾಲಯಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಆದರೆ ಕೆಲವು ಕಡೆ ಈ ವ್ಯವಸ್ಥೆಯು ಹಾನಿಯಾಗಿದೆ. ಇವನ್ನು ರಿಪೇರಿ ಮಾಡಿಸುವ ಅವಶ್ಯಕತೆಯನ್ನು ಶಾಲಾ ಶಿಕ್ಷಕರು ಮಾಡಿಸಿದರು. ಸಭೆಯಲ್ಲಿ ಹಾಜರಿದ್ದ ತುಮಕೂರು ಜಿಲ್ಲಾ ಕಾರ್ಯಪಾಲಕ ಅಭಿಯಂತರರು,

ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ಇಲಾಖೆ, ಕುಣಿಗಲ್ ರಸ್ತೆ ತುಮಕೂರು ಇವರಿಗೆ ಪತ್ರ ಬರೆದರೆ ರಿಪೇರಿ ಮಾಡಿಸುವುದಾಗಿ ತಿಳಿಸಿದರು.

ಜಿಲ್ಲಾ ಪರಿಸರ ಮಾಲಿನ್ಯ ಇಲಾಖೆಯ ಅಧಿಕಾರಿಗಳಿಗೆ ಪರಿಸರ ಮಿತ್ರ ಶಾಲಾ ಪ್ರಶಸ್ತಿಯನ್ನು ನೀಡುವ ಬಗ್ಗೆ ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲೇ ಕಾರ್ಯಯೋಜನೆ ಸಿದ್ದಪಡಿಸಿ ಕಾರ್ಯ ಪ್ರವೃತ್ತರಾಗಲು ಮಾನ್ಯ ಜಿಲ್ಲಾಧಿಕಾರಿಗಳು ಮಾರ್ಗದರ್ಶನ ನೀಡಿದರು. ಮುಂದಿನ ಜೂನ್-5 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಪ್ರತಿ ಶಾಲೆಯಲ್ಲಿ ಅವಕಾಶ ಇರುವುದನ್ನು ಗುರುತಿಸಿ ಸಸ್ಯಗಳನ್ನು ನೆಟ್ಟು ವನ ಅಭಿವೃದ್ಧಿ ಪಡಿಸುವುದು ಹಾಗೂ ತೋಟಗಾರಿಕೆ ಇಲಾಖೆಯಿಂದ ಶಾಲೆಗಳಿಗೆ ಅಗತ್ಯವಾದ ಗಿಡಗಳನ್ನು ನೀಡಲು ಮತ್ತು ಬೆಳೆಸಲು ತಿಳಿಸಿರುತ್ತಾರೆ.

ಮುಂದಿನ ವರ್ಷ ಜಿಲ್ಲೆಗೆ ಬರುವ ರೂ 25000/- ಅನುದಾನದಲ್ಲಿ ಉತ್ತಮವಾಗಿ ಇಕೋ ಕ್ಲಬ್ ಚಟುವಟಿಕೆ ಮಾಡಿದ ಶಾಲೆಗಳನ್ನು ಪ್ರಥಮ, ದ್ವಿತೀಯ & ತೃತೀಯ ಬಹುಮಾನ ನೀಡಿ ಗೌರವಿಸಲು ತಿಳಿಸಿದರು. ಈ ವರ್ಷ ಕಛೇರಿಯಲ್ಲಿ ಆನ್‌ಲೈನ್ ತರಬೇತಿ, ಸಭೆಗಳನ್ನು ನಡೆಸುವ ವ್ಯವಸ್ಥೆ ಅಥವ ಇತರೆ ಸೌಲಭ್ಯ ಕಲ್ಪಿಸಲು ಬಳಕೆ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು. ಉಳಿದ ಎಲ್ಲಾ ಇಲಾಖೆಗಳು ಶಾಲಾ ಇಕೋಕ್ಲಬ್ ಚಟುವಟಿಕೆಗಳಿಗೆ ನೆರವು ನೀಡಲು, ಎನ್‌ಜಿಓಗಳು ಮುಂದಿನ ವರ್ಷ ತರಬೇತಿ ನೀಡಲು ಕ್ರಮವಹಿಸಲು ಸೂಚಿಸಿದರು. ಡಿವೈಪಿಸಿರವರು ಸಭೆಯಲ್ಲಿ ಹಾಜರಾದ ಎಲ್ಲರಿಗೂ ವಂದಿಸಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು
ಜಿಲ್ಲಾಧಿಕಾರಿಗಳ ಕಛೇರಿ
ತುಮಕೂರು ಜಿಲ್ಲೆ.

ಗೆ,

1. ಮಹಾನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು.
2. ಜಿಲ್ಲಾ ಅರಣ್ಯಾಧಿಕಾರಿಗಳು, ತುಮಕೂರು, ಸದಸ್ಯರು.
3. ಜಿಲ್ಲಾ ಪರಿಸರ ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ, ತುಮಕೂರು ಜಿಲ್ಲೆ. ಸದಸ್ಯರು.
4. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ತುಮಕೂರು. ಸದಸ್ಯರು.
5. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತುಮಕೂರು, ಸದಸ್ಯರು.
6. ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತುಮಕೂರು, ಸದಸ್ಯರು.
7. ಉಪಾಧ್ಯಕ್ಷರು, ತುಮಕೂರು ವಿಜ್ಞಾನ ಕೇಂದ್ರ, ತುಮಕೂರು.
8. ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ತುಮಕೂರು.
9. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ಮತ್ತು ಮಧುಗಿರಿ.
10. ಸಂಪನ್ಮೂಲ ಸಂಸ್ಥೆಯ ಸದಸ್ಯರು, ಸಿಪಿಆರ್ ಪರಿಸರ ಶಿಕ್ಷಣ ಕೇಂದ್ರ ಬೆಂಗಳೂರು. ಸದಸ್ಯರು.
11. ರೀಡ್ ಬುಕ್ ಫೌಂಡೇಷನ್, ಎನ್.ಜಿ.ಓ ತುಮಕೂರು.
12. ಮಡಿಲು ಸೇವಾ ಟ್ರಸ್ಟ್, ಗುಬ್ಬಿ.
13. ತುಮಕೂರು ಜಿಲ್ಲೆಯ ಎಲ್ಲಾ ಇಕೋ-ಕ್ಲಬ್ ಶಾಲೆಗಳ ಮುಖ್ಯೋಪಾಧ್ಯಾಯರುಗಳು.
14. ಕಛೇರಿ ಪ್ರತಿ.